# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 150

ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ

ಉತ್ತರಿಸುವ ಸಚಿವರು : ಮಾನ್ಯ: ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 14.02.2024

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಇತರೆ ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು: ಇವರಿಗೆ ಯಾವ ರೀತಿಯ ಸೇವಾ ಭದ್ರತೆ ಕಲ್ಪಿಸಲಾಗಿದೆ:<br>(ವಿವರ ನೀಡುವುದು)</td><td>ರಾಜ್ಯದ ನಾಲ್ಕು ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆಯ ಮಾಹಿತಿ ಈ ಕೆಳಕಂಡಂತಿದೆ:
<table>
<tr><th>ಸಂಸ್ಥೆ</th><th>ನೌಕರರ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>33,844</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>28,840</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>21063</td></tr>
<tr><td>ಕ.ಕ.ರ.ಸಾ.ನಿಗಮ</td><td>18339</td></tr>
<tr><td>ಒಟ್ಟು</td><td>102086</td></tr>
</table>
ಸಾರಿಗೆ ಸಂಸ್ಥೆಗಳ ನೌಕರರಿಗೆ ಕಲ್ಪಿಸಲಾಗಿರುವ ಸೇವಾ ಭದ್ರತೆಯ ವಿವರಗಳು ಈ ಕೆಳಕಂಡಂತಿದೆ:<br>
• ನೌಕರರು ನಿಗಮದ ಪದವೃಂದ ಹಾಗೂ ನೇಮಕಾತಿ ನಿಯಮಗಳ ಅಡಿಯಲ್ಲಿ ನೇಮಕಗೊಂಡಿದ್ದು, ಅವರುಗಳಿಗೆ ಗರಿಷ್ಠ 60 ವರ್ಷಗಳ ವಯೋಮಾನಕ್ಕೆ ಮಿತಿಗೊಳಿಸಿ, ಅವರ ವಯೋಮಾನಕ್ಕೆ ತಕ್ಕಂತೆ ಸೇವೆ ಸಲ್ಲಿಸಲು ಅವಕಾಶಗಳಿರುತ್ತದೆ.<br>
• ಅವರ ಸೇವಾ ಅವಧಿಯಲ್ಲಿ ಅರ್ಹ ಸೇವೆಗೆ ಸೇವೆಯಲ್ಲಿ ಖಾಯಂಗೊಳಿಸುವಿಕೆ, ವಾರ್ಷಿಕ ಬಡ್ತಿ, ಮೇಲ್ದರ್ಜೆಯ ಹುದ್ದೆಯ ಬಡ್ತಿ, ರಜಾ ಸೌಲಭ್ಯ, ಗಳಿಕೆ ರಜೆ ನಗದೀಕರಣ ಇನ್ನೂ ಹಲವಾರು ಸೇವಾ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.</td></tr>
<tr><td>ಆ.</td><td>ಸಾರಿಗೆ ಸಂಸ್ಥೆಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಕುರಿತು ಸರ್ಕಾರದ ನಿಲುವೇನು:</td><td>ನಾಲ್ಕು ಸಾರಿಗೆ ಸಂಸ್ಥೆಗಳನ್ನು ರಸ್ತೆ ಸಾರಿಗೆ ಸಂಸ್ಥೆಗಳ ಕಾಯ್ದೆ, 1950ರಡಿ ಸಾರಿಗೆ ಇಲಾಖೆಯ ಅಧೀನ ನಿಗಮಗಳನ್ನಾಗಿ ಸ್ಥಾಪಿಸಲಾಗಿದ್ದು, ಅದರಂತೆ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವುದರಿಂದ ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ-ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ಆಂತರಿಕ ಸಂಪನ್ಮೂಲಗಳಿಂದಲೇ ಭರಿಸಬೇಕಿದೆ. ಆದ್ದರಿಂದ, ಸರ್ಕಾರಿ</td></tr>
</table>

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ನೌಕರರಿಗೆ ನೀಡಲಾಗುತ್ತಿರುವ ವೇತನವನ್ನು ರಸ್ತೆ ಸಾರಿಗೆ ನಿಗಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನಕ್ಕೆ ಹೋಲಿಸಲು ಬರುವುದಿಲ್ಲ. ಆದರೆ, ಸಾರಿಗೆ ನಿಗಮಗಳ ನೌಕರರು ರಾಜ್ಯ ಸರ್ಕಾರದ ಮಾದರಿಯಲ್ಲಿಯೇ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ರಜಾ ಸೌಲಭ್ಯಗಳು ಮತ್ತು ವೈದ್ಯಕೀಯ ಮರುಪಾವತಿ ಸೌಲಭ್ಯ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯುತ್ತಿರುತ್ತಾರೆ.</td></tr>
<tr><td>ಇ.</td><td>2023ರ ಮೇ ತಿಂಗಳ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು: ಎಲ್ಲಾ ನಿಗಮಗಳು ಲಾಭ ಅಥವಾ ನಷ್ಟದಲ್ಲಿವೆಯೇ:<br>(ವಿವರ ನೀಡುವುದು)</td><td>2023ರ ಮೇ ತಿಂಗಳ ನಂತರ ಸಾರಿಗೆ ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ ಮತ್ತು ಕಳೆದ ಮೂರು ವರ್ಷಗಳಲ್ಲಿ ಸಾರಿಗೆ ಸಂಸ್ಥೆಗಳು ಅನುಭವಿಸಿದ ಲಾಭ/ನಷ್ಟದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಈ.</td><td>ರಾಜ್ಯದಲ್ಲಿ ಪ್ರತಿ ಮಾಹೆ ಸಂಸ್ಥೆವಾರು ಪಾವತಿಸುತ್ತಿರುವ ಟೋಲ್ ಒಟ್ಟು ಮೊತ್ತ ಎಷ್ಟು: ಟೋಲ್ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆದುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು:</td><td>ರಾಜ್ಯದಲ್ಲಿ ಪ್ರತಿ ಮಾಹೆ ಸಂಸ್ಥೆವಾರು ಪಾವತಿಸುತ್ತಿರುವ ಸರಾಸರಿ ಟೋಲ್ ಒಟ್ಟು ಮೊತ್ತ ಈ ಕೆಳಕಂಡಂತಿದೆ:<br><br>(ರೂ. ಕೋಟಿಗಳಲ್ಲಿ)<br>
<table>
<tr><th>ಸಂಸ್ಥೆ</th><th>ಮೊತ್ತ</th></tr>
<tr><td>ಕ.ರಾ.ರ.ಸಾ.ನಿಗಮ</td><td>10.13</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1.30</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>4.54</td></tr>
<tr><td>ಕ.ಕ.ರ.ಸಾ.ನಿಗಮ</td><td>4.58</td></tr>
<tr><td>ಒಟ್ಟು</td><td>20.55</td></tr>
</table>
<br>ನಾಲ್ಕು ಸಾರಿಗೆ ಸಂಸ್ಥೆಗಳು ಸಾರ್ವಜನಿಕ ಸೇವಾ ಸಂಸ್ಥೆಗಳಾಗಿರುವುದರಿಂದ ನಿಗಮಗಳು ಸಾರಿಗೆಗಳಿಗೆ ಟೋಲ್ ಬಳಕೆದಾರರ ಶುಲ್ಕ ಪಾವತಿಯಿಂದ ವಿನಾಯಿತಿಯನ್ನು ನೀಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಕ.ರಾ.ರ.ಸಾ.ನಿಗಮದಿಂದ ಕೋರಲಾಗಿ, ಪ್ರಾಧಿಕಾರವು ಟೋಲ್ ಶುಲ್ಕ ಪಾವತಿ ಅಧಿಸೂಚನೆಯಲ್ಲಿ ಯಾವುದೇ ವಿನಾಯಿತಿ ಇಲ್ಲದಿರುವುದಾಗಿ ಹಿಂಬರಹ ನೀಡಿರುತ್ತದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ವ್ಯಾಪ್ತಿಯ ರಾಜ್ಯ ಹೆದ್ದಾರಿಗಳಲ್ಲಿ ಆಚರಣೆ ಮಾಡುವ ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳ ಸಾರಿಗೆಗಳಿಗೆ ಟೋಲ್ ಶುಲ್ಕದಲ್ಲಿ ವಿನಾಯಿತಿ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಲಾಗಿದೆ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | **ಬೆಂ.ಮ.ಸಾ.ಸಂಸ್ಥೆಗೆ** ಟೋಲ್ ಶುಲ್ಕದಲ್ಲಿ ವಿನಾಯಿತಿಯನ್ನು ನೀಡುವಂತೆ ಮತ್ತೊಮ್ಮೆ ಕೋರಲಾಗಿದ್ದರೂ ಸಹ ನ್ಯಾಷನಲ್ ಹೈವೇ ಅಥಾರಿಟಿ ಆಪ್ ಇಂಡಿಯಾದಿಂದ ಯಾವುದೇ ಪ್ರತಿಕ್ರಿಯೆ ಸ್ವೀಕರಿಸಿರುವುದಿಲ್ಲ.<br><br>ಮುಂದುವರೆದು, ನೈಸ್ ರಸ್ತೆಯಲ್ಲಿ ಆಚರಣೆಗೊಳಿಸುವ ಸಂಸ್ಥೆಯ ಸಾರಿಗೆಗಳಿಗೆ ವಿನಾಯಿತಿ ನೀಡುವಂತೆ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆಯನ್ನು ದಿನಾಂಕ:22.11.2023ರಂದು ಕೋರಲಾಗಿದೆ. |
| ಉ. | ಸಾರಿಗೆ ಸಂಸ್ಥೆಯ ವಾಹನಗಳಿಗೆ ಒದಗಿಸುತ್ತಿರುವ ಇಂಧನಕ್ಕೆ ತೆರಿಗೆ ವಿನಾಯಿತಿ ಇದೇಯೇ; ಹಾಗಿದ್ದಲ್ಲಿ, ತೆರಿಗೆ ವಿನಾಯಿತಿ ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?<br>(ವಿವರ ನೀಡುವುದು) | ಸಾರಿಗೆ ಸಂಸ್ಥೆಗಳ ವಾಹನಗಳಿಗೆ ಒದಗಿಸುತ್ತಿರುವ ಇಂಧನಕ್ಕೆ ಯಾವುದೇ ರೀತಿಯ ತೆರಿಗೆ ವಿನಾಯಿತಿ ಇರುವುದಿಲ್ಲ ಹಾಗೂ ವಿನಾಯಿತಿ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ.<br><br>ಬೆಂ.ಮ.ಸಾ.ಸಂಸ್ಥೆಯ ವಾಹನಗಳಿಗೆ ಮಾರುಕಟ್ಟೆ ದರಕ್ಕಿಂದ ಕಡಿಮೆ ದರದಲ್ಲಿ ಇಂಧನವನ್ನು ಖರೀದಿಸಲಾಗುತ್ತಿರುತ್ತದೆ.<br><br>ಕ.ಕ.ರ.ಸಾ.ನಿಗಮದಲ್ಲಿ ಪ್ರಸ್ತುತ ಇಂಧನವನ್ನು ಮೆ\|\| ಹೆಚ್.ಪಿ.ಸಿ.ಎಲ್ ಕಂಪನಿಯಿಂದ ಪಡೆಯಲಾ ಗುತ್ತಿದ್ದು, 3501/- per KL of HSD before levy of sales tax on bulk consumer priceಗೆ ರಿಯಾಯಿತಿ ನೀಡಿರುತ್ತಾರೆ. |

ಸಂಖ್ಯೆ: ಟಿಡಿ 08 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

# ಅನುಬಂಧ

2023ರ ಮೇ ತಿಂಗಳ ನಂತರ ಫೆಬ್ರುವರಿ - 2024ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮಾಹಿತಿ ಕೆಳಗಿನಂತಿರುತ್ತದೆ:

**(ರೂ.ಕೋಟಿ ಗಳಲ್ಲಿ)**

| ಸಂಸ್ಥೆಗಳು | ಬಿಡುಗಡೆ ಮಾಡಿದ ಮೊತ್ತ |
|---|---|
| ಕ.ರಾ.ರ.ಸಾ.ನಿಗಮ | 1244.71 |
| ಬೆಂ.ಮ.ಸಾ.ಸಂಸ್ಥೆ | 815.96 |
| ವಾ.ಕ.ರ.ಸಾ.ಸಂಸ್ಥೆ | 857.36 |
| ಕ.ಕ.ರ.ಸಾ.ನಿಗಮ | 673.78 |

ನಾಲ್ಕು ಸಾರಿಗೆ ಸಂಸ್ಥೆಗಳು ಕಳೆದ 03 ವರ್ಷಗಳಲ್ಲಿ ಅನುಭವಿಸಿದ ನಷ್ಟದ ಮಾಹಿತಿ ಕೆಳಗಿನಂತಿರುತ್ತದೆ:

**(ರೂ.ಕೋಟಿಗಳಲ್ಲಿ)**

| ವರ್ಷ | ನಷ್ಟ |
|---|---|
| **ಕ.ರಾ.ರ.ಸಾ.ನಿಗಮ** | |
| 2020-21 | 581.15 |
| 2021-22 | 423.31 |
| 2022-23 (ಅಂದಾಜು) | 42.89 |
| **ಬೆಂ.ಮ.ಸಾ.ಸಂಸ್ಥೆ** | |
| 2020-21 | 164.20 |
| 2021-22 | 178.25 |
| 2022-23 (ಅಂದಾಜು) | 77.38 |
| **ವಾ.ಕ.ರ.ಸಾ.ಸಂಸ್ಥೆ** | |
| 2020-21 | 389.08 |
| 2021-22 | 462.58 |
| 2022-23 | 26.14 |
| **ಕ.ಕ.ರ.ಸಾ.ನಿಗಮ** | |
| 2020-21 | 186.45 |
| 2021-22 | 225.82 |
| 2022-23 (ಅಂದಾಜು) | 114.99 |